ಒ ಎಸ್ 30/2018 ಪಿ.ಡಬ್ಲ್ಯೂ:1

ಇಂದು ದಿಃ 03.12.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು ಪುಟ್ಟತಾಯಮ್ಮ ರವರಿಂದ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತೇನೆ. ಆ ದಾವಾ ಆಸ್ತಿಯು ಅವರಿಗೆ ಸಿದ್ದಶೆಟ್ಟಿಯವರಿಂದ ಬಂದಿರುತ್ತದೆ. ಪುಟ್ಟತಾಯಮ್ಮ ನಮ್ಮ ಎದುರುಮನೆಯವರಾದ ಕಾರಣ ಅವರ ಪರಿಚಯ ಇದೆ. 2003ರಲ್ಲಿ ನಾನು ಪುಟ್ಟಟತಾಯಮ್ಮನಿಂದ ಕ್ರಯ ಪತ್ರ ಬರೆಸಿಕೊಂಡಿಲ್ಲ ಎಂದರೆ ಸುಳ್ಳು. 2003ರಲ್ಲಿ ಹೊಲ ಮಾರುವ ಅಗತ್ಯತೆ ಪುಟ್ಟತಾಯಮ್ಮನಿಗೆ ಇರಲಿಲ್ಲ ಎಂದರೆ ಸುಳ್ಳು. ಕ್ರಯಪತ್ರಕ್ಕೆ ಪುಟ್ಟತಾಯಮ್ಮ, ಅವರ ಮಕ್ಕಳು ಮತ್ತು ಗಂಡ ಸಹಿ ಹಾಕಿಲ್ಲ ಮತ್ತು ಆ ಸಹಿಗಳು ನಕಲಿ ಸಹಿಗಳು ಎಂದರೆ ಸುಳ್ಳು. ಕ್ರಯದ ಸಮಯದಲ್ಲಿ ನನ್ನ ಮಾವನಿಗೆ ಆರೋಗ್ಯ ಹದಗೆಟ್ಟಿತ್ತು ಅವರು ಐ ಸಿ ಯು ನಲ್ಲಿ ಇದ್ದ ಕಾರಣ ಖಾತೆ ಮಾಡಿಸಲು ಆಗಲಿಲ್ಲ. ನಂತರ ತಹಸೀಲ್ದಾರರ ಕಛೇರಿಗೆ ಹೋಗಿ ಕೇಳಿದಾಗ ನಕ್ಷೆ ಇಲ್ಲದ ಕಾರಣ ಖಾತೆ ಮಾಡಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ. 2018ರಲ್ಲಿ ದಾವೆ ಸಲ್ಲಿಸಿದಾಗ ಪುಟ್ಟತಾಯಮ್ಮ ಜೀವಂತ ಇದ್ದರು. ತಿದ್ದುಪಡಿ ಮಾಡಿಸಿಕೊಡುವಂತೆ ಪುಟ್ಟತಾಯಮ್ಮನನ್ನು ಕೇಳಲಾಗಿ ನೀನೆ ಮಾಡಿಸಿಕೊ ಎಂದು ಹೇಳಿರುತ್ತಾರೆ. ಆದರೆ ತಿದ್ದುಪಡಿ ಮಾಡಿಕೊಡಿ ಎಂದು ಪುಟ್ಟತಾಯಮ್ಮನಿಗೆ ನಾನು ಬರವಣಿಗೆ ನೊಟೀಸ್ ಕೊಟ್ಟಿಲ್ಲ. ಕ್ರಯಪತ್ರಕ್ಕೆ 2003ರಲ್ಲಿ ಸಾಕ್ಷಿ ಹಾಕಿದ ಸಾಕ್ಷಿದಾರರುಗಳು ಅಪ್ರಾಪ್ತರಾಗಿದ್ದು ಆ ದಿನ ಅವರು ಶಾಲೆ ಮತ್ತು ಕಾಲೇಜಿಗೆ ಹೋಗಿದ್ದರು ಎಂದರೆ ಸರಿಯಲ್ಲ. ದಾವಾ ಜಮೀನನನ್ನು ನಾನು ಯಾವತ್ತೂ ಪುಟ್ಟತಾಯಮ್ಮನಿಂದ ಖರೀದಿಸಿಲ್ಲ ಆ ಕಾರಣಕ್ಕಾಗಿ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಆಸ್ತಿ ಯಾವತ್ತೂ ಪುಟ್ಟತಾಯಮ್ಮನ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅಕ್ರಮ ಲಾಭಕ್ಕಾಗಿ ದಾವೆ ಸಲ್ಲಿಸಿದ್ದು ಪುಟ್ಟತಾಯಮ್ಮನಿಗೆ ತಿಳಿಯದ ರೀತಿಯಲ್ಲಿ ತಿದ್ದುಪಡಿ ಮಾಡಲು ಪ್ರಯತ್ನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಖಾತೆಯಾಗದ ಕಾರಣ ಋಣಭಾರ ಪತ್ರದಲ್ಲಿ ನನ್ನ ಹೆಸರು ಬಂದಿರುವುದಿಲ್ಲ. ದಾವಾ ಜಮೀನನ್ನು ಸುಳ್ಳಾಗಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.